# ಫೇಸ್‌ಬುಕ್ಕಿನ ಪ್ಲೆಷರ‍್ರೂ ಪ್ರೆಷರ‍್ರೂ...



**ತಾವು ಮಾಡುವ ಪ್ರತಿಯೊಂದು ಕೆಲಸವನ್ನೂ ಫೇಸ್‌ಬುಕ್‌ನಲ್ಲಿ ಹಂಚಿಕೊಳ್ಳುವವರಿದ್ದಾರೆ. ಮೈ–ಮನಸ್ಸಿಗೆ ಆರಾಮಿರದಾಗಲೂ ಫೇಸ್‌ಬುಕ್‌ನಲ್ಲಿ ಈಜಾಡುತ್ತಾ, ಲೈಕ್, ಕಮೆಂಟ್ ಮಾಡುವವರಿದ್ದಾರೆ. ಊಟ, ನಿದ್ದೆಯಂತೆ ಫೇಸ್‌ಬುಕ್ ಕೂಡ ನಮ್ಮ ದಿನಚರಿಯೇ ಆಗಿಹೋಗಿದೆ.**

■ **ಧಾರಿಣಿ ಮಾಯಾ**

ಬಹಳ ಹಿಂದೆ ನಮ್ಮ ಮನೆಯಲ್ಲಿ ಕೆಲಸ ಮಾಡುತ್ತಿದ್ದಾಕೆ ಒಂದು ದಿನ ಅಚಾನಕ್ಕಾಗಿ ದಾರಿಯಲ್ಲಿ ಸಿಕ್ಕಿ, ಅವಳ ಕ್ಷೇಮಸಮಾಚಾರ ವಿಚಾರಿಸುತ್ತಾ ನಿಂತೆ. ಅವಳು ಓದಿದ್ದು ಐದನೇ ಕ್ಲಾಸ್‌ವರೆಗಾದರೂ ಎಲ್ಲಾ ವಿಷಯಗಳನ್ನೂ ಬಹಳ ಚೆನ್ನಾಗಿ ತಿಳಿದುಕೊಂಡಿದ್ದಳು. ನಮ್ಮನೆಯಲ್ಲಿ ಕೆಲಸಕ್ಕಿದ್ದಾಗ ಟೀವಿ, ದಿನಪತ್ರಿಕೆಗಳಲ್ಲಿ ಬರುವ ವರದಿ, ಪುರಾಣವನ್ನೆಲ್ಲಾ ಒಪ್ಪಿಸುತ್ತಿದ್ದ ಚತುರೆ ಅವಳು. ಹೀಗೆ ಮಾತಾಡುತ್ತಾ, 'ಅಕ್ಕಾ, ನಾನು ನಿಮ್ಮನ್ನು ಆಗಾಗ ಫೇಸ್‌ಬುಕ್ಕಿನಲ್ಲಿ ನೋಡ್ತಿರ್ತೀನಿ, ನನ್ನದೂ ಫೇಸ್‌ಬುಕ್ ಅಕೌಂಟ್ ಐತೆ' ಅಂದಳು.

ಒಂದು ಕ್ಷಣ ಏನು ಹೇಳಬೇಕೆಂದೇ ಗೊತ್ತಾಗದೆ ಅವಳನ್ನೇ ನೋಡುತ್ತಾ ನಿಂತುಬಿಟ್ಟೆ. ಅಬ್ಬಾ! ನಮ್ಮ ಟೆಕ್ನಾಲಜಿಗೆ ಮಾರುಹೋಗದವರೇ ಇಲ್ಲ ನೋಡಿ!.

ಸಾಮಾಜಿಕ ಜಾಲತಾಣಗಳು ಸೃಷ್ಟಿಸಿರುವ ಹವಾನೇ ಬೇರೆ. ಎಲ್ಲಾ ವರ್ಗ, ವಯೋಮಾನದವರನ್ನೂ ಗಬಕ್ಕನೆ ಸೆಳೆದುಕೊಂಡುಬಿಡುತ್ತದೆ. ಟ್ವಿಟರ್, ಫೇಸ್‌ಬುಕ್, ಇನ್‌ಸ್ಟಾಗ್ರಾಂ, ರೀಲ್ಸ್‌ಗಳ ಹುಚ್ಚಿಗೆ ಒಳಗಾಗಿ 2 ವರ್ಷದ ಮಗುವಿನಿಂದ 90ರ ವಯಸ್ಸಿನವರೂ ಈ ತಾಣಗಳಲ್ಲಿ ತಮ್ಮ ಛಾಪು ಮೂಡಿಸಿ ಒಂದೇ ಗಳಿಗೆಗೆ ಸಾವಿರಾರು ಲೈಕ್ಸು, ನೂರಾರು ಕಮೆಂಟುಗಳ ಸರದಾರರಾಗಿಬಿಡುತ್ತಾರೆ. ಅದೆಲ್ಲಾ ಸುಖಾಸುಮ್ಮನೆ ಬರುವಂಥದ್ದಲ್ಲ ಬಿಡಿ. ಅದಕ್ಕಾಗಿ ಸಮಯ, ಎನರ್ಜಿ, ಬುದ್ಧಿಯನ್ನೆಲ್ಲಾ ಖರ್ಚು ಮಾಡಬೇಕು. ಸದ್ಯ ಫೇಸ್‌ಬುಕ್ಕಿನತ್ತ ನಮ್ಮ ಕಣ್ಣು ಹೊರಳಿಸೋಣ.

ಫೇಸ್‌ಬುಕ್ಕಿನಲ್ಲಿ ವ್ಯಕ್ತಿಗಳ ಭಾವಚಿತ್ರ, ಖುಷಿ, ದುಃಖ–ದುಮ್ಮಾನ, ಸಂಕಟ, ಕುತೂಹಲ–ಅಚ್ಚರಿ, ಆರೋಗ್ಯವಂತ ವಾದ–ವಿವಾದಗಳು, ತರ್ಕಗಳು, ತಲೆಹರಟೆ ವಿಚಾರಗಳು, ಕೆಲವೊಮ್ಮೆ ಮುಜುಗರದ ಅಥವಾ ಬೋರ್ ಎನಿಸುವ ಬರಹಗಳು, ಅವಿರತವಾಗಿ ಕಾಡುವ ಪ್ರಶ್ನೆಗಳು, ಆ ಪ್ರಶ್ನೆಗಳಿಗೆ ಬರುವ ವೈವಿಧ್ಯಮಯ ಉತ್ತರಗಳು, ಪ್ರತ್ಯುತ್ತರಗಳು, ಹುಚ್ಚು ಕುದುರೆಯ ಬೆನ್ನೇರಿದಂತೆ ನಾಗಾಲೋಟದಿ ಓಡುವ ವಿಚಾರಧಾರೆಗಳು, ಕೆಲವೊಮ್ಮೆ ಕ್ಷಣಕ್ಷಣಕ್ಕೂ ಹೇರಲಾಗುವ ಪೋಸ್ಟ್‌ಗಳು ಯಾವಾಗಲೂ ರಾರಾಜಿಸುತ್ತಿರುತ್ತವೆ.

ಅಷ್ಟೇ ಏಕೆ, ತಾವು ಮಾಡುವ ಪ್ರತಿಯೊಂದು ಕೆಲಸವನ್ನೂ ಹಂಚಿಕೊಳ್ಳುವವರಿದ್ದಾರೆ. ಪುಣ್ಯಕ್ಕೆ, 'ಐ ಆಮ್ ಬ್ರಷಿಂಗ್, ಐ ಆಮ್ ಟಾಯ್ಲೆಟ್ಟಿಂಗ್...' ಅಂತ ಮಾತ್ರ ಇನ್ನೂ ಯಾರೂ ಹಾಕುತ್ತಿಲ್ಲವಷ್ಟೇ. (ಹಾಕಿದರೂ ಅಚ್ಚರಿಯಿಲ್ಲ). ನಮ್ಮೆದೆಗಪ್ಪಳಿಸಿ ಬರುವ ಭಾವಾವೇಶದ ಅಲೆಗಳು, ತಲೆಯಲ್ಲಿ ಗಿರಕಿ ಹೊಡೆಯುವ ಯೋಚನಾಲಹರಿಯನ್ನು ಕ್ಷಣಮಾತ್ರದಲ್ಲಿ ನೂರಾರು ಜನರಿಗೆ ಮುಟ್ಟಿಸಬಿಡಬಲ್ಲ ಶಕ್ತಿಶಾಲಿ ಮಾಧ್ಯಮ ಇದು. ನಮ್ಮ ದಿನನಿತ್ಯದ ಊಟ, ನಿದ್ದೆ ಹೇಗೋ ವಾಸ್ತವ, ಭ್ರಮಾಲೋಕವನ್ನೆಲ್ಲ ತನ್ನ ತೆಕ್ಕೆಗೆ ಸುರುವಿಕೊಂಡ ಫೇಸ್‌ಬುಕ್ ಕೂಡ ನಮ್ಮ ದಿನಚರಿಯೇ ಆಗಿಹೋಗಿದೆ.

ಇಲ್ಲಿ ಹರಿದಾಡುವ ಲೈಕ್, ಕಮೆಂಟಿನ ಕಥೆಯೇ ದೊಡ್ಡದಿದೆ. ದಿನದ ಒತ್ತಡದಲ್ಲೂ, ಮೈ–ಮನಸ್ಸಿಗೆ ಆರಾಮಿರದಾಗಲೂ ಫೇಸ್‌ಬುಕ್‌ನಲ್ಲಿ ಈಜಾಡುತ್ತಾ, ಲೈಕ್, ಕಮೆಂಟ್ ಮಾಡುವವರಿದ್ದಾರೆ. ನಿಮ್ಗೆ 'ಲೈಕ್' ಬೇಕಂದ್ರೆ, ನೀವೂ ಮತ್ತೊಬ್ಬರಿಗೆ ಕಡ್ಡಾಯವಾಗಿ 'ಲೈಕ್' ಕೊಡ್ಲೇಬೇಕು. ಹಾಗೆಯೇ, ನೀವು ಮಾಡಿದ ಕಮೆಂಟಿಗೆ, ಧನ್ಯವಾದದ ಸೂಚಕ ಬಂದಾಗ, ಮರೆಯದೆ ಪುನಃ ಅದಕ್ಕೊಂದು ಲೈಕ್ ಕೊಡಬೇಕು. ಇದೊಂಥರಾ ಫೇಸ್‌ಬುಕ್ಕಿನ ಪ್ಲೆಷರ‍್ರು ಹಾಗೂ ಪ್ರೆಷರ‍್ರು. ಇವೆರಡನ್ನೂ ಅನುಭವಿಸಲೇಬೇಕು.

'ದೊಡ್ಡೋವ್ರ' ಬಿಡಿ, ಅವರು ಒಂದು ಪದ ಅಥವಾ ವಾಕ್ಯ ಹಾಕಿದ್ರೂ ನೂರಾರು ಲೈಕು, ಕಮೆಂಟುಗಳು ಉದುರುತ್ತವೆ. ಈ 'ದೊಡ್ಡೋವ್ರ' ಅನ್ನೋರ ಆಯ್ಕೆಯ ಮಾನದಂಡ ಅವರವರ ಫಾಲೋವರ್ಸ್‌ಗೆ ಬಿಟ್ಟಿದ್ದು. ಸಾಮಾನ್ಯರು ನುಸುಳಿ ಅದೇನೇನೋ ಯೋಚಿಸಿ, ತಲೆಕೆಡಿಸ್ಕೊಂಡು